ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅ) ಕರ್ನಾಟಕ ಸ್ಟ್ಯಾಂಪು (ಮೂರನೇ ತಿದ್ದುಪಡಿ) ವಿಧೇಯಕ,1999 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟ್ಯಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ:

``1999ರ ಕರ್ನಾಟಕ ಸ್ಟ್ಯಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟ್ಯಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ನಾನು ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **- ಸಹಬಂಧ 1**

(6) ವಿತ್ತೀಯ ಕಾರ್ಯಕಲಾಪಗಳು

(ಅ) 1999-2000ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೆಯ ಕಂತು) ಮಂಡಿಸುವುದು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು) :— ಮಾನ್ಯ ಅಧ್ಯಕ್ಷರೆ ಭಾರತದ ಸಂವಿಧಾನದ 2005ನೇ ಒಂದನೇ ಅನುಶ್ಚೇದದ ಮೇರೆಗೆ 1999-2000 ನೇ ಸಾಲಿನ ಪೂರಕ ಅಂದಾಜುಗಳ ಮೇಲಿನ ಮೊದಲನೇ ಕಂತನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು :— ಮಂಡಿಸಲಾಗಿದೆ.

ಅಧ್ಯಕ್ಷರು :— ಈಗ ಬೇರೆ ಡಿಮಾಂಡ್ಸ್‌ಗಳನ್ನು ಮೂವ್ ಮಾಡೋಣವೇ? 1999-2000 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

(7) ಮಾಜಿ ಪಟೇಲ್‌ರುಗಳಿಗೆ ಅನುಕಂಪ ಭತ್ಯೆ ಬಗ್ಗೆ

ಅಧ್ಯಕ್ಷರು :— ಮಾನ್ಯ ಉಪಮುಖ್ಯಮಂತ್ರಿಯವರೇ, ಆಗಲೇ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಇದ್ದರು. ಅವರನ್ನು ಕೇಳಿದ್ದರೆ ಅವರೇ ಉತ್ತರ ಕೊಡುತ್ತಿದ್ದರು, ಅವರು ಹೊರಟುಹೋದರು. ಅವರ ಪರವಾಗಿ ನೀವೇ ಉತ್ತರ ಕೊಟ್ಟುಬಿಡಿ. ಮಾಜಿ ಪಟೇಲರುಗಳು ಇದ್ದಾರಲ್ಲಾ. ಅವರ ಪರಾಪ್ತಿದಾರರು ಇದ್ದಾರಲ್ಲಾ, ಅವರಿಗೆ ಮಾತ್ರ ಅನುಕಂಪ ಭತ್ಯವನ್ನು ಕೊಡುತ್ತಾರೆ. ಯಾರು ಗುಮಾಸ್ತೆ ಪಟೇಲರು ಇದ್ದರು ಅವರಿಗೆ ಅನುಕಂಪ ಭತ್ಯ ಕೊಡುತ್ತಿಲ್ಲ. ಅವರಲ್ಲಿ ನೂರರಲ್ಲಿ 75 ಭಾಗ ಸತ್ತು ಹೋಗಿದ್ದಾರೆ, ಉಳಿದಿರುವವರು ಇನ್ನು 25 ಭಾಗ ಮಾತ್ರ. ಅದೆಲ್ಲಾ ಸೇರಿದರೆ 25-30 ಲಕ್ಷ ರೂ ಬರಬಹುದು. ಇದು ಇಡೀ ರಾಜ್ಯಕ್ಕೆಲ್ಲಾ ಅನ್ವಯಿಸುತ್ತದೆ. ಇಲ್ಲಿ ಪ್ರಸ್ತಾವ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಒಪ್ಪಿಕೊಂಡು ಹೋದರು. ಇದರ ಬಗ್ಗೆ ಉತ್ತರ ಆಮೇಲೆ ಹೇಳುತ್ತೀರೇನು?

ಶ್ರೀ ಸಿದ್ಧರಾಮಯ್ಯ :— ಹಣಕಾಸಿನ ಪರಿಸ್ಥಿತಿ ಏನಿದೆ ಅದನ್ನೆಲ್ಲಾ ನೋಡಿಬಿಟ್ಟು ಹೇಳುತ್ತೇನೆ.

ಅಧ್ಯಕ್ಷರು :— ಏನು, ಪಾಪ ಅವರು ಇರುವುದೇ ಕಡಿಮೆ ಸಂಖ್ಯೆಯಲ್ಲಿ 1978ನೇ ಇಸವಿಗೆ ಇಡೀ ರಾಜ್ಯವೆಲ್ಲಾ ಸೇರಿದರೆ ಸಾವಿರ ಜನ ಕೂಡ ಆಗುವುದಿಲ್ಲ. ಇದರ ಬಗ್ಗೆ ಸಾಯಂಕಾಲ ಉತ್ತರ ಹೇಳುತ್ತೀರಾ?

ಶ್ರೀ ಸಿದ್ಧರಾಮಯ್ಯ :— ಸಾಯಂಕಾಲ ಈ ಬಗ್ಗೆ ಉತ್ತರ ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಪಟೇಲರಿಗೆ ಸಹ ಯಾವುದೇ ರೀತಿಯ ಸಹಾಯ ದೊರೆಯುತ್ತಿಲ್ಲ.

ಅಧ್ಯಕ್ಷರು :— ನಾನು ಕೇಳಿದ್ದು ಇಡೀ ರಾಜ್ಯಕ್ಕೆ ಏನಪ್ಪ ನೀವು? ನಾನೇನೂ ಪಟೇಲನೂ ಅಲ್ಲ, ಶ್ಯಾನುಭೋಗನೂ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಜೆ.ಹೆಚ್. ಪಟೇಲರು ಈ ಕ್ಯಾಟಗರಿಯಲ್ಲಿ ಬರುತ್ತಾರೇನು? ಅವರಿಗೂ ಪೆನ್‌ಷನ್ ಕೊಡುತ್ತೀರಾ?